## ಮೆದುಳಿನ ಗಡ್ಡೆ ಲಕ್ಷಣಗಳೇನು?

- ತಲೆನೋವು ನಿಧಾನವಾಗಿ ಆರಂಭಗೊಂಡು ನಂತರ ವಿಪರೀತ ತಲೆನೋವಿಗೆ ತಿರುಗುವುದು
- ಕಣ್ಣು ಮಂಜಾಗುವುದು
- ವಾಕರಿಕೆ ಹಾಗೂ ವಾಂತಿ
- ಕೈ ಕಾಲಿನ ಭಾಗದಲ್ಲಿ ಸಂವೇದನೆ ಕಳೆದುಕೊಳ್ಳುವುದು
- ಮಾತನಾಡಲು ಕಷ್ಟವಾಗುವುದು
- ದಿನದ ಕೆಲಸ ಕಾರ್ಯಗಳಲ್ಲಿ ವಿಪರೀತ ಗೊಂದಲ
- ಕಿವಿ ಕೇಳಿಸದಂತಾಗುವುದು
- ಮರೆವು
- ಪಾರ್ಶ್ವವಾಯು ಆದ ಹಾಗೆ ಅನುಭವವಾಗುವುದು
- ಮಾನಸಿಕವಾಗಿ ಆಘಾತ; ಖಿನ್ನತೆ ಆವರಿಸುವುದು

ಬ್ರೈನ್ ಟ್ಯೂಮರ್ ಬರುತ್ತದೆ ಎಂಬುದು ವೈದ್ಯಕೀಯ ಲೋಕದಲ್ಲಿ ಇನ್ನೂ ಸಾಬೀತಾಗಿಲ್ಲ. ಆದರೆ ಅತಿಯಾದ ರೇಡಿಯೇಷನ್‌ನಿಂದ ಮೆದುಳಿಗೆ ಹಾನಿ ಆಗುವ ಸಾಧ್ಯತೆ ಇದೆ, ಹೀಗಾಗಿ ಅತಿಯಾದ ಮೊಬೈಲ್ ಬಳಕೆ, ಇಯರ್ ಫೋನ್ ಬಳಕೆ ಮೇಲೆ ನಿಯಂತ್ರಣವಿರುವುದು ಒಳ್ಳೆಯದು.

**◆ ಮೆದುಳಿನ ಗಡ್ಡೆಯಲ್ಲಿ ಎರಡು ವಿಧಗಳಿವೆ ಎಂದಿರಿ. ಅವು ಯಾವುವು?**

ಮೆದುಳಿನ ಗಡ್ಡೆಯಲ್ಲಿ ಮುಖ್ಯವಾಗಿ ಹಾನಿಕರವಲ್ಲದ ಗಡ್ಡೆಗಳು ಮತ್ತು ಮಾರಣಾಂತಿಕ ಗಡ್ಡೆಗಳು ಎಂದು ಎರಡು ವಿಧ. ಹಾನಿಕರವಲ್ಲದ ಗಡ್ಡೆಗಳು ಕ್ಯಾನ್ಸರ್ ಕೋಶಗಳನ್ನು ಹೊಂದಿರುವುದಿಲ್ಲ ಮತ್ತು ನಿಧಾನವಾಗಿ ಬೆಳೆಯುತ್ತವೆ. ಅವು ಸಾಮಾನ್ಯವಾಗಿ ದೇಹದ ಇತರ ಭಾಗಗಳಿಗೆ ಹರಡುವುದಿಲ್ಲ. ಆದರೂ ಇವು ಅಪಾಯಕಾರಿ. ಮಾರಣಾಂತಿಕ ಗಡ್ಡೆಗಳು ಕ್ಯಾನ್ಸರ್ ಕೋಶಗಳನ್ನು ಹೊಂದಿರುತ್ತವೆ ಮತ್ತು ಸುತ್ತಮುತ್ತಲಿನ ಮೆದುಳಿನ ಅಂಗಾಂಶವನ್ನು ಆಕ್ರಮಿಸುತ್ತವೆ.

**◆ ಮೆದುಳಿನಲ್ಲಿ ಗಡ್ಡೆ ಬೆಳೆದಿರುವುದನ್ನು ಪತ್ತೆ ಹಚ್ಚುವುದು ಹೇಗೆ?**

ಸಿಟಿ ಸ್ಕ್ಯಾನ್ ಮಾಡಿಸಿದರೆ ಸಾಕು. ಇದರಲ್ಲಿ ಶೇ. 99ರಷ್ಟು ನಿಖರವಾಗಿ ತಿಳಿಯಬಹುದು. ಇದರಲ್ಲಿ ಪಾಸಿಟಿವ್ ಬಂದರೆ, ಎಂಆರ್‌ಐ ಸ್ಕ್ಯಾನ್ ಮಾಡಿಸುವ ಮೂಲಕ ಯಾವ ಭಾಗದಲ್ಲಿ ಎಷ್ಟು ಪ್ರಮಾಣದಲ್ಲಿ ಬೆಳೆದಿದೆ ಎಂಬ ಮಾಹಿತಿಯನ್ನು ತಿಳಿಯಬಹುದು. ವೈದ್ಯರ ಸಲಹೆ ಮೇರೆಗೆ ಸ್ಕ್ಯಾನ್ ಮಾಡಿಸುವುದು ಉತ್ತಮ.

**◆ 60 ವರ್ಷ ದಾಟಿದವರಲ್ಲಿ ಮೆದುಳಿನ ಗಡ್ಡೆ ಕಾಣಿಸಿಕೊಂಡರೆ ಇದನ್ನು ನಿವಾರಿಸುವುದು ಸುಲಭವೇ?**

ಮೆದುಳಿನಲ್ಲಿ ಗಡ್ಡೆ ಬೆಳೆಯಲು ಯಾವುದೇ ವಯಸ್ಸಿನ ಮಿತಿ ಇಲ್ಲ. ಆದರೆ, ವಯಸ್ಸಾದವರಲ್ಲಿ ಸೆಕೆಂಡರಿ ಬ್ರೈನ್ ಟ್ಯೂಮರ್ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಎಂದರೆ, ಈಗಾಗಲೇ ದೇಹದಲ್ಲಿ ಇತರ ಭಾಗದಲ್ಲಿ ಕ್ಯಾನ್ಸರ್ ಕಾಣಿಸಿಕೊಂಡು ನಂತರ ಅದು ಮೆದುಳಿನ ಟ್ಯೂಮರ್ ಆಗಿ ಹರಡುತ್ತದೆ. ಪ್ರೈಮರಿ ಬ್ರೈನ್ ಟ್ಯೂಮರ್ ಸಾಮಾನ್ಯವಾಗಿ ಮೆದುಳಿನಲ್ಲಿಯೇ ಆರಂಭವಾಗುವ ಟ್ಯೂಮರ್ ಆಗಿದ್ದು, ಇದು ಅತ್ಯಂತ ಅಪಾಯಕಾರಿಯೂ ಹೌದು. ಸೆಕೆಂಡರಿ ಬ್ರೈನ್ ಟ್ಯೂಮರ್‌ಗೆ ಚಿಕಿತ್ಸೆ ನೀಡಲು ಸಾಧ್ಯವಿದೆ. ವಯಸ್ಸಾದವರಲ್ಲಿ ಮೊದಲು ಬಿಪಿ, ಡಯಾಬಿಟಿಸ್ ಅನ್ನು ನಿಯಂತ್ರಣಕ್ಕೆ ತರಬೇಕಾಗುತ್ತದೆ. ಜೊತೆಗೆ ಇವರಿಗೆ ಓಪನ್ ಸರ್ಜರಿ ಮೂಲಕ ಟ್ಯೂಮರ್ ತೆಗೆಯುವುದು ಕಷ್ಟಕರ. ಹೀಗಾಗಿ ರೇಡಿಯೊಥೆರಪಿ ಅಥವಾ ಕೀಮೊಥೆರಪಿ ಮೂಲಕವೇ ಅವರಿಗೆ ಗಡ್ಡೆ ಕರಗಿಸಬೇಕಾಗುತ್ತದೆ.

**◆ ಇದಕ್ಕೆ ಪರಿಹಾರವೇನು? ಶಸ್ತ್ರ ಚಿಕಿತ್ಸೆಯೊಂದೇ ದಾರಿಯೇ?**

ಒಮ್ಮೆ ಟ್ಯೂಮರ್ ಬೆಳೆದರೆ ಅದನ್ನು ತೆಗೆದು ಹಾಕುವುದೊಂದೇ ಮಾರ್ಗ. ಮೊದಲು ಟ್ಯೂಮರ್ ಮೆದುಳಿನ ಯಾವ ಭಾಗದಲ್ಲಿ ಕಾಣಿಸಿಕೊಂಡಿದೆ ಎಂಬುದನ್ನು ಪತ್ತೆ ಹಚ್ಚಬೇಕು. ನಂತರ ಆ ಟ್ಯೂಮರ್ ಯಾವ ಪ್ರಕಾರಕ್ಕೆ ಸೇರಿದೆ ಎಂಬುದನ್ನು ತಿಳಿಯಲು ಮೊದಲು ಆ ಟ್ಯೂಮರ್‌ನ ಸಣ್ಣ ತುಣುಕನ್ನು ತೆಗೆದುಕೊಂಡು ಪರಿಶೀಲಿಸಿ, ಅದು ಬೆನಿಗ್ನ್ ಅಥವಾ ಮ್ಯಾಲಿಗ್ನಂಟ್ ಬ್ರೈನ್ ಟ್ಯೂಮರ್ ಎಂದು ತಿಳಿದು ನಂತರ ಸೂಕ್ತ ಚಿಕಿತ್ಸೆ ನೀಡಬೇಕಾಗುತ್ತದೆ. ಪ್ರಾರಂಭಿಕ ಹಂತದಲ್ಲಿಯೇ ಟ್ಯೂಮರ್ ಅನ್ನು ಕಂಡುಹಿಡಿದರೆ ಶೀಘ್ರವೇ ಅದನ್ನು ಗುಣಪಡಿಸಬಹುದು. ಈಗಂತೂ ವೈದ್ಯಕೀಯ ತಂತ್ರಜ್ಞಾನ ಬಹಳ ಅಭಿವೃದ್ಧಿ ಹೊಂದಿದ್ದು, ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಶಸ್ತ್ರಚಿಕಿತ್ಸೆ ಮಾಡಬಹುದು. ಟ್ಯೂಮರ್‌ನನ್ನು ಪತ್ತೆ ಹಚ್ಚದೆ ಹಾಗೇ ಬಿಟ್ಟರೆ ಸಾವು ಸಂಭವಿಸುವ ಸಾಧ್ಯತೆ ಇದೆ.

**◆ ಮೆದುಳಿನಲ್ಲಿ ಗಡ್ಡೆ ಬೆಳೆಯದಂತೆ ತಡೆಯಲು ಏನಾದರೂ ಉಪಾಯಗಳಿವೆಯೇ?**

ಬ್ರೈನ್ ಟ್ಯೂಮರ್ ಯಾವ ಕಾರಣದಿಂದ ಬರುತ್ತದೆ ಎಂಬುದು ಇನ್ನೂ ಸಾಬೀತಾಗಿಲ್ಲ. ಹೀಗಾಗಿ ಟ್ಯೂಮರ್ ಬಾರದಂತೆ ತಡೆಗಟ್ಟುವುದು ಅಸಾಧ್ಯ. ಆದರೆ ಇತ್ತೀಚಿನ ಸಂಶೋಧನೆಗಳ ಪ್ರಕಾರ ಹೆಚ್ಚು ರೇಡಿಯೇಷನ್ ಇರುವ ಮೊಬೈಲ್ ಬಳಕೆಯಿಂದ ಮೆದುಳಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಇದು ಟ್ಯೂಮರ್ ಆಗುವ ಸಾಧ್ಯತೆ ಇದೆ ಎನ್ನಲಾಗುತ್ತದೆ. ಆದರೆ, ಇದೂ ಸಾಬೀತಾಗಿಲ್ಲ. ■

